ಶ್ರೀ ಎಂ. ಎನ್. ರಾಮಣ್ಣ.—(ಇ)ಗೆ ಉತ್ತರವಾಗಿ ನಗರ ಪ್ರದೇಶವಾದುದರಿಂದ ರಾಷ್ಟ್ರೀಕರಣ ಮಾಡಿಲ್ಲ ಎಂದು ಹೇಳುತ್ತಾರೆ. ರೀಜನರ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಸರ್ವೇ ಮಾಡಿ, ಅವಶ್ಯಕತೆ ಇದ್ದರೆ ಹೆಚ್ಚು ಬಸ್ಸುಗಳಿಗೆ ಪರ್ಮಿಷನ್ ಕೊಡುವುದಕ್ಕೆ ಆದೇಶವನ್ನು ಸರ್ಕಾರ ಕೊಡುತ್ತದೆಯೇ?

Sri MOHAMED ALI.—That direction has already been given to the Secretary of the R.T.O. to make further survey and if necessary to grant permits.

Supply of Electric Equipments to S. K. District

127. Sri S. JAYAPRAKASH SHETTY (Brahmavar).—

Will the Chief Minister be pleased to refer to reply given to Starred Question No. 19 of V-Session on 24th February 1969 and state:—

(*a*) whether it is a fact that the District Level Officers of South Kanara have requested the Government and Electricity Board to supply electric equipments to the district which is in short supply for expediting supply of electricity ;

(*b*) whether it has come to the notice of the Government that in some parts of the State the equipments are in excess and are being wasted ?

SRI D. PARAMESWARAPPA (Deputy Minister for Major Irrigation and Electricity) [on behalf of SRI VEERENDRA PATIL (Chief Minister)].—

(*a*) No.

(*b*) No.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—(ಅ) ಭಾಗಕ್ಕೆ ಉತ್ತರವಾಗಿ 'ನಿಜವಲ್ಲ' ಎಂದು ಹೇಳಿದ್ದಾರೆ. ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಕೆಲಸ ಏಕೆ ಆಗುತ್ತಿಲ್ಲ ವೆಂದುಕೇಳಿದರೆ ಮೆಟೀರಿಯಲ್ಸ್ ಸಾಕಷ್ಟು ಸಪ್ಲೈ ಆಗುತ್ತಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಯಾರು ಹೇಳುವುದು ನಿಜ ಸ್ವಾಮಿ ?

†ಶ್ರೀ ಡಿ. ಪರಮೇಶ್ವರಪ್ಪ.—ಮೆಟೀರಿಯಲ್ಸ್ ಕಡಮೆ ಇದೆ ಎಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಯಾವ ಒಂದು ಪತ್ರವನ್ನೂ ಬರೆದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾದ ಕಂಬಗಳು ಸಪ್ಲೈ ಆಗುವುದಿಲ್ಲ, ವೈರಿಂಗ್ ಮೆಟೀರಿಯಲ್ಸ್ ಬೇಕಾದಷ್ಟು ಬರುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆಂದು ಸರ್ಕಾರಕ್ಕೆ ಪತ್ರಗಳು ಬಂದಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಅಧಿಕಾರಿಗಳಿಂದ ಈ ತರಹ ಯಾವುದೂ ಪತ್ರ ಬಂದಿಲ್ಲ. ಮಾನ್ಯ ಸದಸ್ಯರು ಒಂದು ಸಾರಿ ಪತ್ರ ಬರೆದಿದ್ದರು. ಅದರ ಮೇರೆ ಕ್ರಮತೆಗೆದುಕೊಂಡು ಸಪ್ಲೈ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಬೇಕಾದಂಥ ಮೆಟೀರಿಯಲ್ಸ್‌ಗೆ ಅವರು ಇಂಡೆಂಟ್ ಕಳುಹಿಸುತ್ತಾರೆಯೇ, ಹೇಗೆ ಸಪ್ಲೈ ಮಾಡಲಾಗುತ್ತದೆ ?

ಶ್ರೀ ಡಿ. ಪರಮೇಶ್ವರಪ್ಪ.—ಬೇಕಾದಷ್ಟು ಮೆಟೀರಿಯಲ್ಸ್ ಡಿವಿಜನ್‌ಮೆಂಟ್ ನಷ್ಟೆ ಖರ್ಚು ಮಾಡುತ್ತೇವೆ.

ಶ್ರೀ ಬೋಳಾ ರಘುರಾಮ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಡೆ ಟ್ರಾನ್ಸ್‌ಫಾರ್ಮರ್ ಕೆಟ್ಟುಹೋಗಿ ದೀಪವಿಲ್ಲದೆ ತೊಂದರೆಯಾಯಿತು ಮತ್ತು ಶ್ರೀ ಫೇಸ್ ಲೈನ್ ಇರುವುದು ಒಂದ ಕ್ಕೊಂದು ಸೇರಿಕೊಂಡು ಎಕ್ಸ್‌ಪ್ಲೋಡ್ ಆಗಿ ರೇಡಿಯೋ, ಟ್ರಾನ್ಸಿಸ್ಟರ್, ಟ್ಯೂಬ್ ಲೈಟ್ಸ್ ಇವೆಲ್ಲ ಕೆಟ್ಟುಹೋಯಿತು. ಇಂಥವಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳುತ್ತಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಅಂಥ ನಿದರ್ಶನಗಳಿರಬಹುದು. ಆದರೆ ತಕ್ಷಣ ಕ್ರಮತೆಗೆದು ಕೊಂಡು ಸರಿಪಡಿಸುತ್ತಾರೆ.

Permission to R.S.S. Volunteers to use open Government space for performing Drill, etc.

208. Sri M. S. KRISHNAN (Malleswaram).—

Will the Chief Minister be pleased to state:—

(*a*) whether the Government has permitted the R. S. S. volunteers to use open space or parks etc., belonging to the Government for performing drill, etc.;

(*b*) whether Government has a proposal before it to ban the R. S. S. on the ground that it is a communal, para-military organisation ?

Sri MANIKRAO PATIL (Deputy Minister for Home) [On behalf of Sri VEERENDRA PATIL (Chief Minister)].—

(*a*) No.

(*b*) No.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಶ್ನೆಗೆ ಉತ್ತರವಾಗಿ 'ನೋ' ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಸರ್ಕಾರ ನಡೆಸುವ ಶಾಲೆಗಳ ಮೈದಾನದಲ್ಲಿ, ನನ್ನ ಕ್ಷೇತ್ರವಾದ ಮಲ್ಲೇಶ್ವರಂ ಶಾಲೆಯ ಮೈದಾನದಲ್ಲಿ, ಆರ್. ಎಸ್. ಎಸ್. ಸಂಸ್ಥೆಯ ಸ್ವಯಂಸೇವಕರು ಲಾಠಿ, ಕತ್ತಿ ಇವುಗಳನ್ನು ಇಟ್ಟುಕೊಂಡು ಸಾಯಂಕಾಲದ ಹೊತ್ತು ಕವಾಯತು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

Sri MANIKRAO PATIL.—It is true that this organisation is holding rallies and training classes periodically in many parts of this State, but I can assure this House that nowhere Government has permitted this organisation to hold their rallies in the premises of Government.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮ ರಾಜ್ಯದಲ್ಲಲ್ಲದೆ ದೇಶದಲ್ಲೆಲ್ಲ ನಡೆಯುವ ಕೋಮುವಾರು ಗಲಭೆಗಳಲ್ಲಿ ಆರ್.ಎಸ್.ಎಸ್. ಸ್ವಯಂಸೇವಕರ ಮತ್ತು ಈ ಸಂಸ್ಥೆಯ ಕೈವಾಡವಿದೆ ಅಥವಾ ಇತ್ತು ಎಂದು ನಮಗೆ ಗೊತ್ತಾಗಿದೆ. ಚಿಕ್ಕಮಗಳೂರು, ಹಾಸನ, ಮಂಗಳೂರು ಮತ್ತು ಇತರ ಕಡೆ ಯಾವ ಕೋಮುಪಾರು ಗಲಭೆ ನಡೆದಿದೆಯೋ ಅದರಲ್ಲಿ ಇವರ ಕೈವಾಡವಿದೆ, ಮತ್ತು ಇದು ಪಾರಾ ಮಿಲಿಟರಿ ಸಂಸ್ಥೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

Mr. SPEAKER.—That question does not arise.